**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 27-8-1979.

ಸಂ. ಇಡಿ 210ಎಮ್‌ಪಿಎಸ್ 76

ಸುತ್ತೋಲೆ

ವಿಷಯ :- ತಾಲ್ಲೂಕು ಕಚೇರಿಗಳಲ್ಲಿ ಇಂಗ್ಲೀಷ್ ಬೆರಳಚ್ಚು ಯಂತ್ರಗಳ ಸರಬರಾಜು ಹಾಗೂ ಹಿಂತೆಗೆದುಕೊಳ್ಳುವಿಕೆ ಇತ್ಯಾದಿ.

ಜಿಲ್ಲಾ ಮಟ್ಟದ ಕೆಳಗಿನ ಕಚೇರಿಗಳಲ್ಲಿ ಕನ್ನಡವನ್ನೇ ಆಡಳಿತ ಭಾಷೆಯಾಗಿ ಬಳಸಬೇಕೆಂಬ ಸರ್ಕಾರದ ನೀತಿಯನ್ನು ಪರಿಗಣಿಸಿ ರಾಜ್ಯ ಮಟ್ಟದ ಅಧಿಕಾರಿ ಸಮಿತಿಯು ದಿನಾಂಕ 27-10-1978ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಾಲ್ಲೂಕು ಮಟ್ಟದ ಕಚೇರಿಗಳಿಗೆ ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಲಾಗುತ್ತಿರುವುದನ್ನು ಗಮನಿಸಿ ಅದರಿಂದ ಕನ್ನಡ ಬಳಕೆಯ ಕಾರ್ಯ ಕುಂಠಿತವಾಗುವುದು ಎಂಬುದನ್ನು ಪರಿಗಣಿಸಿ, ಇನ್ನುಮುಂದೆ ಜಿಲ್ಲಾ ಮಟ್ಟದ ಕೆಳಗಿನ ಕಚೇರಿಗಳಿಗೆ ಇಂಗ್ಲೀಷ್ ಬೆರಳಚ್ಚು ಯಂತ್ರಗಳ ಪೂರೈಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು, ಅವಶ್ಯಕವಿದ್ದಲ್ಲಿ ಮಾತ್ರ ಇಲಾಖೆಯ ಮುಖ್ಯಸ್ಥರು ಇಂಗ್ಲೀಷ್ ಟೈಪರೈಟರು ಸಂಬಂಧಿತ ಕಚೇರಿಗೆ ಪೂರೈಕೆ ಅಗತ್ಯವೆಂದು ಸರ್ಟಿಫಿಕೇಟ್ ನೀಡಿದಲ್ಲಿ ಮಾತ್ರ ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಬೇಕೆಂದೂ ನಿರ್ಣಯಿಸಲಾಯಿತು.

ಸಾಮಾನ್ಯವಾಗಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸುವಾಗ ಮುದ್ರಣ ಹಾಗೂ ಲೇಖನ ಸಾಮಗ್ರಿ ನಿರ್ದೇಶಕರು ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಹಿಂತೆಗೆದುಕೊಂಡು, ಜಿಲ್ಲಾ ಮಟ್ಟದ ಮೇಲಿನ ಕಚೇರಿಗಳಲ್ಲಿ ಅಗತ್ಯವಿರುವ ಕಡೆ ಹಾಗೆ ಹಿಂತೆಗೆದುಕೊಂಡ ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

ಮೇಲೆ ತಿಳಿಸಿರುವ ಅಧಿಕಾರಿ ಸಮಿತಿಯ ನಿರ್ಣಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಕನ್ನಡವನ್ನೇ ಆಡಳಿತ ಭಾಷೆಯಾಗಿ ಬಳಸಬೇಕೆಂಬ ಸರ್ಕಾರದ ನೀತಿಯನ್ನು

ಕಾರ್ಯರೂಪಕ್ಕೆ ತರುವ ಉದ್ದೇಶದಿಂದ, ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆ ನಿರ್ದೇಶಕರು ಇನ್ನು ಮುಂದೆ ತಾಲ್ಲೂಕು ಮಟ್ಟದ ಕಚೇರಿಗಳಿಗೆ ಇಂಗ್ಲೀಷ್ ಬೆರಳಚ್ಚು ಯಂತ್ರಗಳ ಪೂರೈಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸಬೇಕೆಂತಲೂ ಹಾಗೂ ಕನ್ನಡ ಬೆರಳಚ್ಚು ಒದಗಿಸುವ ಕಚೇರಿಯಲ್ಲಿನ ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಹಿಂದೆಗೆದುಕೊಂಡು ಜಿಲ್ಲಾ ಮಟ್ಟದ ಮೇಲಿನ ಕಚೇರಿಗಳಲ್ಲಿ ಅಗತ್ಯವಿರುವ ಕಡೆಗೆ ಮಾತ್ರ ಸರಬರಾಜು ಮಾಡಬೇಕೆಂತಲೂ ನಿರ್ದೇಶಿಸಲಾಗಿದೆ. ಈ ವಿಷಯದಲ್ಲಿ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಅಧಿಕಾರಿಗಳು ಸಹಕರಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಸಹಿ/-

**(ಸಿ. ಚೆನ್ನಬಸಪ್ಪ),**

ಅಧೀನ ಕಾರ್ಯದರ್ಶಿ,

ವಿದ್ಯಾ ಮತ್ತು ಯುವಜನ ಸೇವಾ ಇಲಾಖೆ